

# ದಣಿವರಿಯದ ಪಯಣಿಗ

■ ಪ್ರವೀಣ್ ಕುಲಕರ್ಣಿ

ಸಾವಿಗೂ ವಿಶ್ವ ಪರ್ಯಟನೆಗೂ ಏನು ಸಂಬಂಧ? ಖಂಡಿತಾ ಇದೆ ಎನ್ನುತ್ತಾರೆ ಅಮೆರಿಕದ ಟಾಮ್ ಟರ್ಸಿಚ್ ಎಂಬ ಯುವಕ. ತಮ್ಮ ಜೀವದ ಗೆಳತಿ ಅನ್ನಾ ಮೇರಿ ಅಕಾಲಿಕ ಸಾವನ್ನಪ್ಪಿದಾಗ, 'ಹೌದಲ್ಲ, ನನಗೂ ಸಾವಿದೆ. ಇಲ್ಲಿಯವರೆಗೆ ನಾನು ಏನು ಮಾಡಿದೆ? ಇರುವ ಅಲ್ಪ ಆಯುಷ್ಯದಲ್ಲಿ ಜಗತ್ತನ್ನು ಅರಿಯಬೇಕು. ಅದಕ್ಕಾಗಿ ಕಾಲ್ನಡಿಗೆಯಲ್ಲಿ ಆರೂ ಖಂಡಗಳನ್ನು ಸುತ್ತಬೇಕು' ಎಂಬ ಠರಾವು ತೆಗೆದುಕೊಂಡವರು ಟಾಮ್. ಬಾಳಿನಲ್ಲಿ ಸಾಧ್ಯವಾದಷ್ಟೂ ಅನುಭವವನ್ನು ಪಡೆಯಬೇಕು, ಪಕ್ವವಾಗಿ ಬೆಳೆಯಬೇಕು ಎಂದು ಹೆಜ್ಜೆ ಹಾಕಲು ನಿರ್ಧರಿಸಿದವರು ಅವರು. ವಿಮಾನ, ರೈಲು, ಬಸ್ಸು, ಕಾರುಗಳ ಯಾನದಲ್ಲೂ ದಕ್ಕದ ಸಾವಿರಾರು ಅನುಭವಗಳು ಕಾಲ್ನಡಿಗೆಯ ನಿಧಾನಗತಿಯ ಪಯಣದಲ್ಲಿ ಅವರಿಗೆ ದಕ್ಕಿದವು. ಯಾನ ಶುರು ಮಾಡಿದ ಬಿಂದುವಿನಿಂದ ಮರಳಿ ಅಲ್ಲಿಗೆ ಬಂದು ನಿಂತಾಗ ಟಾಮ್ ಹೊಸ ಮನುಷ್ಯರಾಗಿದ್ದರಂತೆ!

'ಜಗತ್ತನ್ನು ಸುತ್ತುವ ಕನಸು ಕಂಡ ತಕ್ಷಣ ನಾನು ಹೆಜ್ಜೆ ಹಾಕುತ್ತಾ ಹೋಗಿ ಬಿಡಲಿಲ್ಲ. ನನ್ನ ಪದವಿಯನ್ನು ಪೂರ್ಣಗೊಳಿಸಿದೆ. ಅದಕ್ಕಾಗಿ ಮಾಡಿದ ಸಾಲವನ್ನು ಹೋಟೆಲ್ ಮಾಣಿ, ಸೇಲ್ಸ್‌ಮನ್ ಸೇರಿದಂತೆ ಕೆಲವು ವೃತ್ತಿಗಳಲ್ಲಿ ತೊಡಗಿ ತೀರಿಸಿದೆ. ಸಾಲ ತೀರಿಸಿದ ಮೇಲೂ ನನ್ನ ಬ್ಯಾಂಕ್ ಖಾತೆಯಲ್ಲಿ ದುಡ್ಡು ತುಸು ಮಿಗತೆ ಇತ್ತು. 2015ರ ಏಪ್ರಿಲ್ 2ರಂದು ನಾನು, ನಮ್ಮ ಮನೆಯ ಹೊಸ್ತಿಲ ಆಚೆಗೆ ಯಾನದ ಮೊದಲ ಹೆಜ್ಜೆಯನ್ನು ಇಟ್ಟೆ' ಎಂದು ಟಾಮ್ ನೆನೆಯುತ್ತಾರೆ. ಹಾಗೆ ಹೆಜ್ಜೆ ಹೊರಗಿಟ್ಟ ಟಾಮ್ ಏಳು ವರ್ಷಗಳವರೆಗೆ ನಡೆದೇ ನಡೆದರು. ಆರು ಖಂಡಗಳನ್ನು ಹಾದು, 28 ಸಾವಿರ ಮೈಲುಗಳ (ಸರಿಸುಮಾರು 48 ಸಾವಿರ ಕಿ.ಮೀ) ದೂರವನ್ನು ಅವರು ಈ ಅವಧಿಯಲ್ಲಿ ಕ್ರಮಿಸಿದರು. ಹೀಗೆ ಜಗತ್ತನ್ನು ಸುತ್ತಿದ ಹತ್ತನೇ ವ್ಯಕ್ತಿ ಎಂಬ ದಾಖಲೆಗೆ ಅವರು ಪಾತ್ರರಾದರು. ಟಾಮ್ ಜೊತೆ ಅವರ ನೆಚ್ಚಿನ ನಾಯಿ ಸಾವನ್ನಾ ಸಹ ಅಷ್ಟೂ ದೂರವನ್ನು ಕ್ರಮಿಸಿತು. ಹಾಗೆ ಜಗತ್ತನ್ನು ಸುತ್ತಿದ ಮೊದಲ ನಾಯಿ ಎಂಬ ಶ್ರೇಯಕ್ಕೆ ಸಾವನ್ನಾ ಪಾತ್ರವಾಯಿತು.

ನಮ್ಮ ಯಾನ ಎಷ್ಟು ನಿಧಾನವಾಗುತ್ತದೋ ಅಷ್ಟು ಹೆಚ್ಚಿನ ವಿವರಗಳು ನಮಗೆ ದಕ್ಕುತ್ತಾ ಹೋಗುತ್ತವೆ. ಅಂತಹ ಅನುಭವಗಳ ವಿಷಯದಲ್ಲಿ ಟಾಮ್ ಜಗತ್ತಿನ ಅತ್ಯಂತ ಶ್ರೀಮಂತ. ಜಗತ್ತನ್ನು ಅರಿಯುವ ಅಚಲ ಗುರಿಯೊಂದಿದ್ದರೆ ಸಾಕು, ಹೋಟೆಲ್ ರೂಮ್ ಬುಕ್ ಮಾಡುವ ಅಗತ್ಯವಿಲ್ಲ, ಬ್ರೆಡ್–ಬಟರ್–ಜಾಮ್‌ನ ಚಿಂತೆ ಕೂಡ ಬೇಕಾಗಿಲ್ಲ. ಆರಾಮವಾಗಿ ಹೆಜ್ಜೆ ಹಾಕಬಹುದು ಎಂದು ನಿರೂಪಿಸಿದವರು ಅವರು.

'ಕಾಲ್ನಡಿಗೆಯಲ್ಲಿ ಹೊರಟಾಗ ಯಾವುದನ್ನೂ ತಪ್ಪಿಸಿಕೊಳ್ಳಲು ಸಾಧ್ಯವಿಲ್ಲ ಎಂಬುದರ ಸ್ಪಷ್ಟ ಅರಿವು ನನಗಿತ್ತು. ಒಂದುವೇಳೆ ನಾನು ಬೈಕ್‌ನಲ್ಲಿ ಯಾನ ಮಾಡಿದ್ದರೆ, 'ಮುಂದಿನ ಊರು ಅಪಾಯಕಾರಿ' ಎಂದು ಯಾರಾದರೂ ಹೇಳಿದ್ದರೆ, ಆ ಊರನ್ನು ನಾನು ಭರ್ರಂತ ದಾಟಿಕೊಂಡು ಹೋಗಿ ಬಿಡುತ್ತಿದ್ದೆನೇನೋ. ನನಗೆ ಈ ಆಯ್ಕೆ ಬೇಕಿರಲಿಲ್ಲ. ಜಗತ್ತು ಹೇಗಿದೆಯೋ ಹಾಗೆ ಸ್ವೀಕರಿಸಿ, ಅದರ ಅನುಭವವನ್ನು ಉಂಡು ಮುಂದೆ ಹೋಗಬೇಕೆನ್ನುವುದು ನನ್ನ ಅಭಿಲಾಷೆಯಾಗಿತ್ತು' ಎಂದು ಟಾಮ್ ವಿವರಿಸುತ್ತಾರೆ.

ಎಲ್ಲಿಯೇ ಹೋಗಲಿ ಜನರೇ ಜನ. ಆಹಾರ ಸಂಸ್ಕೃತಿಯಲ್ಲಿ ಎಷ್ಟೊಂದು ವೈವಿಧ್ಯ! ಜಗತ್ತಿನ ಯಾವುದೇ ಊರು ತೆಗೆದುಕೊಳ್ಳಿ, ಅಲ್ಲಿನ ಜನರಲ್ಲಿ ಅದೆಂತಹ ಧಾವಂತ! ಮಕ್ಕಳನ್ನು ಶಾಲೆಗೆ ಕಳಿಸುವವರು, ಕೆಲಸಕ್ಕೆ ಹೋಗುವವರು, ಜೀವನ ನಿರ್ವಹಣೆಗೆ ಹೋರಾಡುವವರು... ಅಬ್ಬಬ್ಬಾ, ಈ ಜಗತ್ತಿಗೆ ದಣಿವೇ ಇಲ್ಲ ಬಿಡಿ ಎಂದು ಟಾಮ್ ಉದ್ಗಾರ ತೆಗೆಯುತ್ತಾರೆ. ಎರಡೂವರೆ ಸಾವಿರ ಬೆಳಗು ಮತ್ತು ಬೈಗುಗಳನ್ನು ಅವರು ದಾರಿಯಲ್ಲಿಯೇ ಕಳೆದಿದ್ದಾರೆ. ಸಾವಿರಾರು ಪಕ್ಷಿಗಳ ಕಲರವವನ್ನು, ಅವುಗಳ ಅಂದವನ್ನು ಆಸ್ವಾದಿಸಿದ್ದಾರೆ. ಕುರಿಗಾಹಿಗಳೊಂದಿಗೆ ಹೆಜ್ಜೆ ಹಾಕಿ ಸಂಭ್ರಮಿಸಿದ್ದಾರೆ. ರಾಶಿ ಮಾಡುತ್ತಿದ್ದ ರೈತರ ಜೊತೆ ಕಾಲ ಕಳೆದಿದ್ದಾರೆ. ಭಿಕ್ಷುಕರೊಂದಿಗೆ ಕುಳಿತು ಹರಟಿದ್ದಾರೆ. ಅಪರಿಚಿತರ ಪರಿಚಯ ಮಾಡಿಕೊಂಡು ಅವರ ಮನೆಯಲ್ಲಿ ಆತಿಥ್ಯವನ್ನೂ ಪಡೆದಿದ್ದಾರೆ.

ಭಾರತ ಅವರಿಗೆ ಅತ್ಯಂತ ಹೆಚ್ಚಿನ ಖುಷಿ ಕೊಟ್ಟ ದೇಶ. ಅವರ ಪ್ರವಾಸದ ಆಲ್ಬಂನಲ್ಲಿರುವ ಹೆಚ್ಚಿನ ಚಿತ್ರಗಳು ಭಾರತದಲ್ಲೇ ತೆಗೆದಂಥವಾಗಿವೆ. ತಾಜ್ ಮಹಲ್‌ನ ಮಂಜಿನ ಮುಂಜಾವು, ಕೇರಳದಲ್ಲಿ ಜುಳು ಜುಳು ಮಂಜುಳ ನಿನಾದ ಹೊರಡಿಸುವ ನೀರಿನ ತೊರೆಯ ಮುಂದಿರುವ ಮನೆ, ಗಂಗಾನದಿಯ ತಟದ ಪಟ್ಟಾಂಗ, ಬೀದಿಯ ಬದುಕು, ದೇವಸ್ಥಾನದ ಭಜನೆ ಯಾವ ದೃಶ್ಯವನ್ನೂ ಅವರ ಕ್ಯಾಮೆರಾ ಮಿಸ್ ಮಾಡಿಕೊಂಡಿಲ್ಲ. 'ಅಮೆರಿಕಕ್ಕೂ ಭಾರತ ಸೇರಿದಂತೆ ಇತರ ರಾಷ್ಟ್ರಗಳಿಗೂ ತುಂಬಾ ವ್ಯತ್ಯಾಸವಿದೆ. ಅಮೆರಿಕದಲ್ಲಿ ಕಣ್ಣು ಹಾಯಿಸಿದಷ್ಟು ದೂರಕ್ಕೂ ಭೂಮಿಗೆ ಬೇಲಿ ಹಾಕಿರುತ್ತಾರೆ. ದಾರಿಯಲ್ಲಿ ಎದುರಾಗುವವರ ಕೈಯಲ್ಲಿ ಗನ್‌ಗಳು ಇರುತ್ತವೆ. ಭಾರತದಲ್ಲಿ ಹಾಗಲ್ಲ, ಎಲ್ಲಿ ನೋಡಿದಲ್ಲಿ ಜನಗಳೋ ಜನಗಳು. ಅಲ್ಲದೆ, ಅವರು ದಾರಿಹೋಕರನ್ನು ತುಂಬಾ ಪ್ರೀತಿಯಿಂದ ಮಾತನಾಡಿಸುತ್ತಾರೆ' ಎಂದು ಟಾಮ್ ವಿವರಣೆ ಕೊಡುತ್ತಾರೆ.

ಟಾಮ್ ಮತ್ತು ಸಾವನ್ನಾ ಜೊತೆಯಾಗಿ ಪ್ರತಿದಿನ ಸರಾಸರಿ 18–24 ಮೈಲು ದೂರ ನಡೆದಿದ್ದಾರೆ. ಸಾವನ್ನಾ ಜೊತೆ ಇಲ್ಲದಿದ್ದರೆ ನಾನು ಇಷ್ಟೊಂದು ದೂರ ನಡೆಯುವುದು ಅಸಾಧ್ಯವಾಗಿತ್ತು ಎನಿಸುತ್ತದೆ ಎನ್ನುವ ಈ ಹುಡುಗನೀಗ ಜನರಲ್ಲಿ ಸಕಾರಾತ್ಮಕ ಭಾವ ತುಂಬುವ ಅದ್ಭುತ ಭಾಷಣಕಾರ. ಏಳು ವರ್ಷಗಳ ತಮ್ಮ ಕಾಲ್ನಡಿಗೆ ಯಾತ್ರೆಯ ಟಿಪ್ಪಣಿಗಳನ್ನು 'ದಿ ವರ್ಲ್ಡ್ ವಾಕ್' ಎಂಬ ಕೃತಿಯಾಗಿಸಿದ್ದಾರೆ. ಆ ಕೃತಿಯೀಗ ಜಗತ್ತಿನಾದ್ಯಂತ ಭಾರೀ ಸಂಖ್ಯೆಯ ಓದುಗರ ಮನಸೂರೆಗೊಂಡಿದೆ. ಪ್ರವಾಸ ಹೊರಡುವವರಿಗೆ ನಿಧಾನ ಯಾನದ ಕುರಿತು ಮೋಹವನ್ನೂ ಉಂಟುಮಾಡುತ್ತಿದೆ. ■

Printed and Published by B.A. Ravi on behalf of The Printers (Mysore) Private Ltd. Printed at M/s Rajhan's Enterprises, No.134, 4th Main Road, Industrial Town, Rajajinagar, Bangalore - 560044 and published from The Printers (Mysore) Private Ltd., Plot Nos. 7 to12, Kumbalgodu Industrial Area, II Phase, Bengaluru - 560074. Editor: K.N. TILAK KUMAR.
Editorial Office: 75, M.G Road, Bengaluru-560 001 E-mail:editorsu@sudha.co.in. Phone: 080 45557333, Editorial:45557262,
Circ:1800-425-8009, Advt: 1800-425-8008, ©All rights reserved. Reproduction in whole or in part without permission is prohibited.
RNI No 7891/65